ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

.RNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ವೆ / ವಿಷಯ : DEPARTMENT / SUBJECT:

ಿಕೆ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 15/11/2019

# ಶಬರಿಮಲೆ ವಿವಾದ ವಿಸ್ತೃತ ಪೀಠಕ್ಕೆ

ಕ.ಪ್ರ 15/11/19

## ಮಹಿಳೆಯರ ಪ್ರವೇಶ ಕುರಿತು ಮಹತ್ವದ ಅಂತಿಮ ತೀರ್ಪು ಬರಲಿದೆ ಎಂಬ ನಿರೀಕ್ಷೆ ಹುಸಿ

## ಮರುಪರಿಶೀಲನಾ ಅರ್ಜಿಗಳ ಬಗ್ಗೆ ತೀರ್ಪು ನೀಡದೇ 7 ಸದಸ್ಯರ ಪೀಠಕ್ಕೆ ಪ್ರಕರಣ ವರ್ಗ

**ನವದೆಹಲಿ:** ಕೇರಳದ ಶಬರಿಮಲೆ ಅಯ್ಯಪ್ಪನ ಸನ್ನಿಧಾನಕ್ಕೆ 10ರಿಂದ 50 ವರ್ಷ ವಯೋಮಾನದ ಮಹಿಳೆಯರ ಪ್ರವೇಶಕ್ಕೆ ಅವಕಾಶ ನೀಡುವ ವಿಚಾರವನ್ನು 7 ಸದಸ್ಯರ ವಿಸ್ತೃತ ನ್ಯಾಯಪೀಠಕ್ಕೆ ವಹಿಸಲು ಸರ್ವೋಚ್ಚ ನ್ಯಾಯಾಲಯ ನಿರ್ಧರಿಸಿದೆ. ಇದರ ಜತೆಗೆ ಮಸೀದಿಗಳಲ್ಲಿ ಮಹಿಳೆಯರ ಪ್ರವೇಶದ ನಿಷೇಧ ಹಾಗೂ ಧಾರ್ಮಿಕ ಸ್ಥಳಗಳಲ್ಲಿನ ಮಹಿಳಾ ಅಸಮಾನತೆ ಕುರಿತಾದ ಇತರ ವಿಷಯಗಳನ್ನು ಸಪ್ತಸದಸ್ಯ ಪೀಠದಿಂದಲೇ ವಿಚಾರಣೆ ನಡೆಸಲು ನ್ಯಾಯಾಲಯ ತೀರ್ಮಾನಿಸಿದೆ. ಹೀಗಾಗಿ ಗುರುವಾರ ಮಹತ್ವದ ಅಂತಿಮ ತೀರ್ಪನ್ನು ಸುಪ್ರೀಂ ಕೋರ್ಟ್ ನೀಡಲಿದೆ ಎಂಬ ನಿರೀಕ್ಷೆಗಳು ಹುಸಿಯಾಗಿವೆ.

- **7 ಸದಸ್ಯರ ಪೀಠಕ್ಕೆ ವಿಚಾರಣೆ ವಹಿಸಲು 5 ಸದಸ್ಯರ ಪೀಠದ ನಿರ್ಧಾರ**
- **ಶಬರಿಮಲೆ ಜತೆ ಮಸೀದಿ ಮಹಿಳಾ ಪ್ರವೇಶ ನಿರ್ಬಂಧ, ಇತರ ಲಿಂಗ ಅಸಮಾನತೆಗಳ ವಿಚಾರಣೆ**
- **ಸುಪ್ರೀಂ ಕೋರ್ಟ್‌ನ 3:2 ಬಹುಮತದ ತೀರ್ಮಾನ**
- **ಆದರೆ ಮಹಿಳಾ ಪ್ರವೇಶಕೆ ಅನುಮತಿಸಿದ್ದ 2018ರ ತೀರ್ಪಿಗೆ ತಡೆ ಇಲ್ಲ**

ಸಪ್ತಸದಸ್ಯ ಪೀಠಕ್ಕೆ ಈ ವಿಷಯಗಳ ವಿಚಾರಣೆ ನಡೆಸುವ ಜವಾಬ್ದಾರಿ ವಹಿಸಲು ಮುಖ್ಯ ನ್ಯಾಯಾಧೀಶ ನ್ಯಾ। ರಂಜನ್ ಗೊಗೋಯ್ ಅವರ ಪೀಠ ಸರ್ವಾನುಮತದ ನಿರ್ಣಯ ಕೈಗೊಂಡಿತು. ಆದರೆ ಶಬರಿಮಲೆ ದೇಗುಲಕ್ಕೆ ಎಲ್ಲಾ ವಯೋಮಾನದ ಮಹಿಳೆಯರ ಪ್ರವೇಶಕ್ಕೆ ಅವಕಾಶ ಕಲ್ಪಿಸಿ 2018ರ ಸೆ.28ರಂದು ನೀಡಲಾಗಿದ್ದ ತೀರ್ಪನ್ನು ಮರುಪರಿಶೀಲಿಸುವಂತೆ ಕೋರಲಾಗಿದ್ದ ಅರ್ಜಿಗಳ ಕುರಿತು 3:2ರ 'ಭಿನ್ನ' ತೀರ್ಪು ಪ್ರಕಟಿಸಿತು.

'ಬಹುಮತದ ತೀರ್ಪು' ಪ್ರಕಟಿಸಿದ ನ್ಯಾ। ಗೊಗೋಯ್, ನ್ಯಾ। ಎ.ಎಂ. ಖಾನ್ವಿಲ್ಕರ್ ಹಾಗೂ ನ್ಯಾ। ಇಂದು ಮಲ್ಹೋತ್ರಾ ಅವರು ಮರುಪರಿಶೀಲನಾ ಅರ್ಜಿಗಳ ಬಗ್ಗೆ ತೀರ್ಪು ನೀಡದೇ ವಿಚಾರಣೆಯನ್ನು ಬಾಕಿ ಉಳಿಸಿಕೊಳ್ಳುವ ತೀರ್ಮಾನಕ್ಕೆ ಬಂದರು. 'ಏಕೆಂದರೆ, ಧಾರ್ಮಿಕ ಸ್ಥಳಕ್ಕೆ ಮಹಿಳೆಯರ ಮೇಲೆ ನಿರ್ಬಂಧ ಇರುವುದು ಕೇವಲ ಶಬರಿಮಲೆಯಲ್ಲಿ ಮಾತ್ರವಲ್ಲ, ಇನ್ನೂ ಅನೇಕ ಧಾರ್ಮಿಕ ಸ್ಥಳಗಳಲ್ಲಿ ಅವರಿಗೆ ನಿರ್ಬಂಧವಿದೆ. ಹೀಗಾಗಿ ಈ ಬಗ್ಗೆ ಕೂಡ ವಿಚಾರಣೆ ನಡೆಸಬೇಕಿದೆ' ಎಂದರು.

'ಶಬರಿಮಲೆಯಂತಹ ಧಾರ್ಮಿಕ ಸ್ಥಳಗಳ ವಿಚಾರದಲ್ಲಿ ಸರ್ವೋಚ್ಚ ನ್ಯಾಯಾಲಯ ಒಮ್ಮತದ ನೀತಿ ಹೊಂದಿರಬೇಕು. ಹೀಗಾಗಿ ಶಬರಿಮಲೆ, ಮಸೀದಿಗಳಲ್ಲಿ ಮಹಿಳೆಯರ ನಿರ್ಬಂಧ ಹಾಗೂ ದಾವೂದಿ ಬೋಹ್ರಾ ಸಮುದಾಯದಲ್ಲಿನ ಮಹಿಳೆಯರ ಯೋನಿ ಛೇದನದಂತಹ ವಿಷಯಗಳ ಬಗ್ಗೆ ವಿಸ್ತೃತ ಸಪ್ತ ಸದಸ್ಯ ಪೀಠ ನಿರ್ಧರಿಸಬೇಕು' ಎಂದೂ ನ್ಯಾ। ಗೊಗೋಯ್ ಹೇಳಿದರು.

ಆದರೆ, ಪೀಠದ ಇತರ ನ್ಯಾಯಾಧೀಶರಾದ ನ್ಯಾ। ರೋಹಿಂಟನ್ ನಾರಿಮನ್ ಹಾಗೂ ನ್ಯಾ। ಡಿ.ವೈ. ಚಂದ್ರಚೂಡ ಅವರು 'ಅಲ್ಪಮತ'ದ ತೀರ್ಪು ನೀಡಿ, ಎಲ್ಲ ಮರುಪರಿಶೀಲನಾ ಅರ್ಜಿಗಳನ್ನು ತಿರಸ್ಕರಿಸಿದರು. 'ಎಲ್ಲ ವರ್ಗದ ಮಹಿಳೆಯರಿಗೆ ಪ್ರವೇಶ ಕಲ್ಪಿಸಿ 2018ರ ಸೆ.28ರಂದು ನೀಡಲಾಗಿದ್ದ ತೀರ್ಪು ಸರಿಯಾಗಿದೆ' ಎಂದು ಹೇಳಿದರು.



### 2018ರ ತೀರ್ಪಿಗೆ ತಡೆ ಇಲ್ಲ

ಆದರೆ ನ್ಯಾಯಪೀಠವು 2018ರ ತೀರ್ಪಿನ ಕುರಿತು ಯಾವುದೇ ಪ್ರತಿಕೂಲ ಅನಿಸಿಕೆ ಪ್ರಕಟಿಸಲಿಲ್ಲ, ಅಂದರೆ ತನ್ನ ತೀರ್ಪಿಗೆ ತಡೆ ನೀಡಲಿಲ್ಲ.

### 2018ರ ತೀರ್ಪು ಏನಾಗಿತ್ತು?

ಶಬರಿಮಲೆ ದೇಗುಲಕ್ಕೆ 10–50ರ ವಯೋಮಾನದ ಮಹಿಳೆಯರ ಪ್ರವೇಶಕ್ಕಿದ್ದ ನಿರ್ಬಂಧವನ್ನು ತೆಗೆದುಹಾಕಿದ್ದ ಸುಪ್ರೀಂಕೋರ್ಟ್‌ನ ಪಂಚಸದಸ್ಯರ ನ್ಯಾಯಪೀಠ 2018ರ ಸೆ.28ರಂದು 4–1ರ ಬಹುಮತದಲ್ಲಿ ನೀಡಿದ್ದ ತೀರ್ಪಿನಲ್ಲಿ ಎಲ್ಲಾ ವಯೋಮಾನದ ಮಹಿಳೆಯರು ದೇಗುಲ ಪ್ರವೇಶ ಮಾಡಬಹುದು ಎಂದು ತೀರ್ಪು ನೀಡಿತ್ತು. ಈ ರೀತಿಯ ನಿರ್ಬಂಧ ಹೇರಿಕೆಯು ಅಕ್ರಮ ಮತ್ತು ಅಸಾಂವಿಧಾನಿಕ ಎಂದಿತ್ತು. ಈ ತೀರ್ಪು ಸಂಪ್ರದಾಯವಾದಿಗಳ ಆಕ್ರೋಶಕ್ಕೆ ಕಾರಣವಾಗಿ, ಕೇರಳದಲ್ಲಿ ಹಿಂಸಾಚಾರ ಕೂಡಾ ಸಂಭವಿಸಿತ್ತು. ಈ ತೀರ್ಪನ್ನು ಪುನರ್ ಪರಿಶೀಲಿಸಬೇಕೆಂದು 56 ಅರ್ಜಿ, 4 ರಿಟ್ ಅರ್ಜಿಗಳು ಸಲ್ಲಿಕೆಯಾಗಿದ್ದವು. ಅಲ್ಲದೆ ತೀರ್ಪು ಪ್ರಕಟಗೊಂಡ ನಂತರ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದ 5 ಅರ್ಜಿ ಒಗ್ಗೂಡಿಸಿ ಸುಪ್ರೀಂ ವಿಚಾರಣೆ ನಡೆಸಿತ್ತು. ಇದನ್ನು ಕೇರಳ ಸರ್ಕಾರ ಹಾಗೂ ಶಬರಿಮಲೆ ಅಯ್ಯಪ್ಪ ದೇವಾಲಯ ನೋಡಿಕೊಳ್ಳುವ ತಿರುವಾಂಕೂರು ದೇವಸ್ವಂ ಸಮಿತಿ (ಟಿಡಿಬಿ) ವಿರೋಧಿಸಿದ್ದವು.

### ಈ ಸಲದ ಯಾತ್ರೆಯಲ್ಲಿ ಮಹಿಳಾ ಪ್ರವೇಶ ಆಗುತ್ತಾ?

ಶಬರಿಮಲೆ ದೇವಾಲಯಕ್ಕೆ 10–50 ವಯಸ್ಸಿನ ಮಹಿಳೆಯರ ಪ್ರವೇಶಕ್ಕೆ ಇದ್ದ ನಿರ್ಬಂಧವನ್ನು 2018ರ ಸೆ.28ರಂದು ಸುಪ್ರೀಂ ಕೋರ್ಟು ತೆಗೆದು ಹಾಕಿತ್ತು. ಇದಾದ ಬಳಿಕ ಕಳೆದ ವರ್ಷದ ಶಬರಿಮಲೆ ಯಾತ್ರೆಯಲ್ಲಿ ಕೇರಳದ ಎಡರಂಗದ ಸರ್ಕಾರವು ಈ ವಯಸ್ಸಿನ ಮಹಿಳೆಯರ ಪ್ರವೇಶಕ್ಕೆ ಅವಕಾಶ ಕಲ್ಪಿಸಿತ್ತು. ಆದರೆ ಕೆಲವು ಧಾರ್ಮಿಕ ಸಂಘಟನೆಗಳು ಹಾಗೂ ಪಕ್ಷಗಳಿಂದ ಸರ್ಕಾರದ ನಡೆಗೆ ವಿರೋಧ ವ್ಯಕ್ತವಾಗಿತ್ತು. ಈ ನಡುವೆ, ಗುರುವಾರದ ವಿಚಾರಣೆ ವೇಳೆ ನ್ಯಾಯಪೀಠವು 2018ರ ತೀರ್ಪಿಗೆ ತೀರ್ಪಿಗೆ ತಡೆ ನೀಡಲಿಲ್ಲ. ಈ ಸಲ ನವೆಂಬರ್ 17ರಂದು ಶಬರಿಮಲೆ ಯಾತ್ರೆ ಆರಂಭವಾಗಲಿದೆ. ಹೀಗಾಗಿ ಈ ಸಲವೂ 10ರಿಂದ 50 ವರ್ಷ ವಯಸ್ಸಿನ ಮಹಿಳೆಯರಿಗೆ ಕೇರಳ ಸರ್ಕಾರವು ದೇಗುಲಕ್ಕೆ ಪ್ರವೇಶಾವಕಾಶ ನೀಡುತ್ತಾ ಎಂಬುದೇ ಪ್ರಶ್ನೆ.

### ತೀರ್ಪು ಪರಿಶೀಲಿಸಿ ಮಹಿಳಾ ಪ್ರವೇಶ ಬಗ್ಗೆ ನಿರ್ಧಾರ: ಕೇರಳ ಸಿಎಂ

**ತಿರುವನಂತಪುರ:** ಶಬರಿಮಲೆ ವಿವಾದವನ್ನು 7 ಸದಸ್ಯರ ಪೀಠಕ್ಕೆ ವಹಿಸುವ ಸುಪ್ರೀಂ ಆದೇಶದ ಬಗ್ಗೆ ಪ್ರತಿಕ್ರಿಯಿಸಿರುವ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, 'ಕೋರ್ಟ್‌ನ ಈ ತೀರ್ಮಾನದಿಂದ, 2018ರಲ್ಲಿ ಮಹಿಳಾ ಪ್ರವೇಶಕ್ಕೆ ನೀಡಿದ ಅವಕಾಶದ ತೀರ್ಪಿಗೆ ತಡೆ ಸಿಕ್ಕಿಲ್ಲ ಎಂದೆನಿಸುತ್ತದೆ. ಆದಾಗ್ಯೂ ಸವಿಸ್ತಾರವಾಗಿ ಈಗಿನ ಆದೇಶವನ್ನು ಪರಿಶೀಲಿಸಿ, ಕಾನೂನು ತಜ್ಞರ ಅಭಿಪ್ರಾಯಪಡೆದ ನಂತರ ಮುಂದಿನ ಕ್ರಮ ಜರುಗಿಸುತ್ತೇವೆ' ಎಂದಿದ್ದಾರೆ.

**ಮಹಿಳಾ ಪ್ರವೇಶಕ್ಕೆ ಕಾಂಗ್ರೆಸ್ ವಿರೋಧ**

ವಿಸ್ತೃತ ಪೀಠಕ್ಕೆ ವಿಚಾರಣೆ ವಹಿಸುವ ತೀರ್ಮಾನವನ್ನು ಕೇರಳ ಕಾಂಗ್ರೆಸ್ ಮುಖಂಡ ರಮೇಶ್ ಚೆನ್ನಿತ್ತಲ ಸ್ವಾಗತಿಸಿದ್ದಾರೆ. ಕಳೆದ ಸಲದಂತೆ ಮಹಿಳೆಯರ ಪ್ರವೇಶಕ್ಕೆ ಅವಕಾಶ ನೀಡುವ ನಿರ್ಧಾರವನ್ನು ಸರ್ಕಾರ ಕೈಗೊಳ್ಳಬಾರದು ಎಂದು ಅವರು ಆಗ್ರಹಿಸಿದ್ದಾರೆ.